2021-22ನೇ ಸಾಲಿನಲ್ಲಿ ಸಂಗ್ರಹವಾದ ಜಿಎಸ್‌ಟಿ ಆದಾಯ

₹ **14.76** ಲಕ್ಷ ಕೋಟಿ

2020-21ನೇ ಸಾಲಿನಲ್ಲಿ ಸಂಗ್ರಹವಾದ ನೇರ ತೆರಿಗೆ ಸಂಗ್ರಹದ ಮೊತ್ತ

₹ **12.5** ಲಕ್ಷ ಕೋಟಿ

ದೇಶದಲ್ಲಿ ಆದಾಯ ತೆರಿಗೆ ಕಟ್ಟುವವರು ಕೇವಲ

**5%**

ತೆರಿಗೆದಾರರ ಗರಿಷ್ಠ ಸಂಖ್ಯೆಯ ನಿರೀಕ್ಷೆ

**7% - 8%**

2021-22ನೇ ಸಾಲಿನಲ್ಲಿ ಸಂಗ್ರಹವಾದ ನೇರ ತೆರಿಗೆ ಸಂಗ್ರಹದ ಮೊತ್ತ

₹ **14.16** ಲಕ್ಷ ಕೋಟಿ

(ವೈಯಕ್ತಿಕ, ಕಾರ್ಪೊರೇಟ್ ತೆರಿಗೆ ಸಹಿತ)

2022-23ನೇ ಸಾಲಿನಲ್ಲಿ ಸಂಗ್ರಹವಾಗುವ ನೇರ ತೆರಿಗೆಯ ನಿರೀಕ್ಷಿತ ಮೊತ್ತ

₹ **16** ಲಕ್ಷ ಕೋಟಿ




ಹೀಗಾಗಿಯೇ ಸಾಕಷ್ಟು ಪ್ರಯೋಜನಗಳನ್ನು ನೀಡಿದ್ದೇವೆ'' ಎಂದು ವಿತ್ತ ಸಚಿವರೇ ಘೋಷಿಸಿದ್ದಾರೆ. ಹಾಗಾಗಿ, ಹಳೆಯ ತೆರಿಗೆ ಪಾವತಿ ವ್ಯವಸ್ಥೆ ಕ್ರಮೇಣ ಬದಿಗೆ ಸರಿಯಲಿದೆ.



ತೆರಿಗೆದಾರರು ತಮಗೆ ಸೂಕ್ತವೆನಿಸುವ ತೆರಿಗೆ ಪಾವತಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಆರ್ಥಿಕ ಸಲಹೆಗಾರರ ಮಾರ್ಗದರ್ಶನ ಸೂಕ್ತ. ಒಂದು ವೇಳೆ, ಉದ್ಯೋಗಿಯು ತಾನು ಬಯಸುವ ತೆರಿಗೆ ಪಾವತಿ ಪದ್ಧತಿಯ ಆಯ್ಕೆಯನ್ನು ತಿಳಿಸದೇ ಹೋದರೆ, ಹೊಸ ತೆರಿಗೆ ಪಾವತಿ ಪದ್ಧತಿಯನ್ನೇ ನಿಮ್ಮ ಆಯ್ಕೆಯೆಂದು ಪರಿಗಣಿಸಲಾಗುತ್ತದೆ. ಅದರ ಅನ್ವಯವೇ ವೇತನದಾರರ ತೆರಿಗೆ ಕಡಿತದ ಲೆಕ್ಕಾಚಾರವನ್ನು ಕಂಪನಿಗಳು ಮಾಡುತ್ತವೆ.

ಹೊಸ ತೆರಿಗೆ ಪಾವತಿ ಪದ್ಧತಿಯಲ್ಲಿ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ಈ ಬಜೆಟ್‌ನಲ್ಲಿ 7 ಲಕ್ಷ ರೂಪಾಯಿಗೆ ವಿಸ್ತರಿಸಲಾಗಿದೆ. ಮೊದಲು 5 ಲಕ್ಷ ರೂ. ತನಕದ ಆದಾಯಕ್ಕೆ ಯಾವುದೇ ಒಂದು ಸಣ್ಣ ಚೀಟಿಯನ್ನೂ ನೀಡದೆ ತೆರಿಗೆ ವಿನಾಯಿತಿಯನ್ನು ಪಡೆಯಲು ಅವಕಾಶವಿತ್ತು. ತೆರಿಗೆ ವಿನಾಯಿತಿ ಮಿತಿಯನ್ನು 2 ಲಕ್ಷ ಹೆಚ್ಚಿಸಲಾಗಿದ್ದು, ಈಗ 7 ಲಕ್ಷ ರೂ. ಆದಾಯಕ್ಕೆ ತೆರಿಗೆ ವಿನಾಯಿತಿ ಪಡೆಯಬಹುದಾಗಿದೆ. ಇದರೊಟ್ಟಿಗೆ ವೇತನದಾರರು ಮತ್ತು ಪಿಂಚಣಿದಾರರಿಗೆ



